**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**

**ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 1580/2023**

ಡಿ.ಡಬ್ಲ್ಯೂ- 1

| | | |
|---|---|---|
| ಹೆಸರು | : | ಬಸವರಾಜ |
| ತಂದೆಯ ಹೆಸರು | | ಮಹಾದೇವಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | | ವರ್ಕಶಾಪ್ |
| ವಾಸಸ್ಥಳ | : | ಸಾಃ ಸೀತೆಕೊಂಡ,ಹಿರೇಕೆರೂರ |

**ದಿನಾಂಕಃ 17-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಸ್.ಪಿ.ಸಿ., ಆರೋಪಿ ಪರ ವಕೀಲರಿಂದಃ**

2015 ರಲ್ಲಿ ನವಚೇತನ ಪೈನಾನ್ಸನಲ್ಲಿ ನಾನು ರೂ. 1,00,000/- ಗಳ ಸಾಲವನ್ನು ಪಡೆದುಕೊಂಡಿದ್ದೆ. ಸದ್ರಿ ಸಾಲ ಪಡೆಯುವಾಗ ನಾನು ಒಂದು ಖಾಲಿ ಚೆಕ್, ರೂ. 200/- ಮುಖ ಬೆಲೆಯ ಬಾಂಡ್‌ನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟ ಖಾಲಿ ಚೆಕ್ ಮತ್ತು ಬಾಂಡ್ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸದ್ರಿ ಸಾಲವನ್ನು 02 ವರ್ಷಗಳ ಅವಧಿಯೊಳಗೆ ಮರುಪಾವತಿ ಮಾಡಬೇಕೆಂದು ತಿಳಿಸಿದ್ದರು. 3 ವರ್ಷದೊಳಗೆ ನಾನು ರೂ.1,50,000/-ಗಳನ್ನು ನಾನು ಸದ್ರಿ ಸಂಸ್ಥೆಗೆ ಕಟ್ಟಿರುತ್ತೇನೆ. ನಾನು ಸದ್ರಿ ಸಂಸ್ಥೆಗೆ ಸುಮಾರು ರೂ. 60,000/- ಪಿಗ್ಮಿ ಕಟ್ಟಿರುತ್ತೇನೆ. ನಂತರ ಸದ್ರಿ ಹಣವನ್ನು ರಾಜಿ ಮಾಡಿಕೊಳ್ಳೋಣ ಎಂದು ರೂ.20,000/- ಗಳನ್ನು ತೆಗೆದುಕೊಂಡು ಹಾವೇರಿಯ ಹೆಡ್ ಆಫೀಸ್‌ಗೆ ಬರುವಂತೆ ನನಗೆ ಹೇಳಿದ್ದರು. ಆದರೆ ನಾನು ಹೋಗಲಿಲ್ಲ. ಆ ನಂತರ ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಪಿರ್ಯಾದಿದಾರರ ಪರ ವಕೀಲರು ಗೈರು ಹಾಜರಿಯಾಗಿದ್ದು, ಸಾಕ್ಷಿಯ ಪಾಟೀ ಸವಾಲಿಗಾಗಿ ಮುಂದಿನ ದಿನಾಂಕವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

- ಸಹಿ -

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**